MR. SPEAKER : He is an young member. ಅರ್ಜೆಂಟ್ ತರಿಸಿ ಮಾಡಿಸಿಕೊಡಿ. ಅವರು ಮಾಡಿಸಿಕೊಡುತ್ತಾರೆ.

ಶ್ರೀ ಹೆಚ್.ಸಿ. ಮಹದೇವಪ್ಪ : ಮೂರು ಜನ ಡಾಕ್ಟರ್‌ಗಳು ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಸಫಾರೀ ಯೋಜನೆ

411 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮೈಸೂರು ನಗರದ ಚಾಮುಂಡಿ ಬೆಟ್ಟದಲ್ಲಿ ಸಫಾರಿ ಯೋಜನೆ ಕೈಗೊಳ್ಳುವ ಆಲೋಚನೆ ಏನಾದರೂ ಸರ್ಕಾರದ ಮುಂದಿದೆಯೇ?*

2) *ಹಾಗಿದ್ದಲ್ಲಿ ಎಷ್ಟು ವೆಚ್ಚದಲ್ಲಿ ಸದರಿ ಯೋಜನೆ ಕಾರ್ಯರೂಪಕ್ಕೆ ಬರುತ್ತದೆ?*

3) *ಸದರಿ ಯೋಜನೆಯಡಿಯಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳು ಒಳಗೊಂಡಿದೆ?*

4) *ಹಾಗಿದ್ದಲ್ಲಿ ಈ ಯೋಜನೆ ಯಾವಾಗ ಪ್ರಾರಂಭಗೊಳ್ಳುತ್ತದೆ?*

5) *ಈ ಕೆಲಸದ ನಿರ್ವಹಣೆ ಯಾರು ಮಾಡುವರು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಹೌದು

2) ಯೋಜನೆಯ ಅಂದಾಜು ವೆಚ್ಚ 4.00 ಕೋಟಿ ರೂ.ಗಳು.

3) ಸದ್ರಿ ಯೋಜನೆಯಡಿಯಲ್ಲಿ ಬಿಳಿ ಹುಲಿ ಸಫಾರಿ, ಕಾಡುಕೋಣ ಸಫಾರಿ (ಬೈಸನ್), ನವಿಲುಸಫಾರಿ ಹಾಗೂ ಕರಡಿ ಸಫಾರಿ ಇತ್ಯಾದಿ ಒಳಗೊಂಡಿರುತ್ತದೆ.

4) ಸದ್ರಿ ಯೋಜನೆ ಇನ್ನೂ ಪರಿಶೀಲನಾ ಹಂತದಲ್ಲಿದೆ.

5) ಮೃಗಾಲಯ ಪ್ರಾಧಿಕಾರ, ಮೈಸೂರು ಈ ಕೆಲಸವನ್ನು ನಿರ್ವಹಿಸುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಚಾಮುಂಡಿ ಬೆಟ್ಟದ ಸಫಾರಿ ಯೋಜನೆಯಲ್ಲಿ ಯಾವ ರೀತಿ ಅಭಿವೃದ್ಧಿ ಕೆಲಸವಿದೆ ಎಂದು ಕೇಳಿರುವುದಕ್ಕೆ ಬಿಳಿ ಹುಲಿ ಸಫಾರಿ, ಕಾಡು ಕೋಣ ಸಫಾರಿ ಹಾಗೂ ಕರಡಿ ಸಫಾರಿ ಎಂದು ಹೇಳಿದ್ದಾರೆ. ಆದರೆ ಸ್ಕೀಮ್‌ನ ಪ್ರಕಾರ ಅದು ಹರ್ಬಿವೋರಸ್ ಸಫಾರಿ ಆಗಬೇಕು. ಎಂದರೆ ಕೇವಲ ಹುಲ್ಲನ್ನು ತಿನ್ನುವಂತಹ ಪ್ರಾಣಿಗಳ ಸಫಾರಿ ಮಾತ್ರ ಆಗಬೇಕು. ಇದರಲ್ಲಿ ಕ್ರೂರ ಮೃಗಗಳ ಸಫಾರಿಯನ್ನು ಮಾಡುವುದಕ್ಕೆ ಔಚಿತ್ಯವಾದಂತಹ ಜಾಗವೇ ಎಂದು ಒಂದು ಪ್ರಶ್ನೆ? ಎರಡನೆ ಪ್ರಶ್ನೆ ಅರಣ್ಯ ಇಲಾಖೆಯಿಂದ ಈಗಾಗಲೇ ಮೃಗಾಲಯಕ್ಕೆ 56 ಹೆಕ್ಟೇರ್

ಭೂಮಿಯನ್ನು ವಹಿಸಿಕೊಟ್ಟಿದ್ದೀರಿ. ನೂರು ಹೆಕ್ಟೇರ್ ಭೂಮಿಯನ್ನು ನೆಹರೂ ಲೋಕದ ವ್ಯಾಪ್ತಿಯಿಂದ ಅಕ್ವಿಸಿಷನ್‌ಗೋಸ್ಕರ ಕೊಟ್ಟಿದ್ದೀರಿ. ಆದರೆ, ಅದೇ ಪ್ರದೇಶದಲ್ಲಿ ತಾವು ಹೆಚ್.ಯು.ಡಿ. ಇಲಾಖೆಯಿಂದ ಕಳೆದ 15ನೇ ತಾರೀಖು ಲೇಔಟ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗಾದರೆ ಈ ಸಫಾರಿಯ ಪರಿಸ್ಥಿತಿ ಏನು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಜಮೀನು ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ. ನನ್ನ ಹತ್ತಿರ ಈಗ ಅದರ ಬಗ್ಗೆ ಮಾಹಿತಿ ಇಲ್ಲ. ಮಾಹಿತಿ ತರಿಸಿಕೊಡುತ್ತೇನೆ ಅಥವಾ ನನ್ನ ಹತ್ತಿರ ತಾವು ಬಂದು ಡಿಸ್‌ಕಸ್ ಮಾಡಿ. ಇನ್ನು ಸಫಾರಿ ಬಗ್ಗೆ ಹೇಳುವುದಾದರೆ ಹೊಸದಾಗಿ ನಾಲ್ಕು ಕೋಟಿ ರೂಪಾಯಿಗಳ ಒಂದು ಯೋಜನೆ ಮಂಜೂರಾಗಿದೆ. ಇನ್ನು ಆ ಕಾರ್ಯಕ್ರಮ ಎತ್ತಿಕೊಂಡಿಲ್ಲ. ಈಗ ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುವವರಿದ್ದೇವೆ. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ಚಾಮುಂಡಿ ಬೆಟ್ಟವನ್ನು ಬಹಳ ಚೆನ್ನಾಗಿ ಮಾಡಬೇಕು ಎನ್ನುವ ಉದ್ದೇಶ ಇದೆ. ತಾವು ಏನು ಹೇಳಿದಿರಿ ಮೃಗಗಳು ಬಹಳ ಚೆನ್ನಾಗಿ ಇರಬೇಕು, ಕಚ್ಚುವ ಪ್ರಾಣಿಗಳು ಇರಬಾರದು ಎಂದು, ಆದರೆ ಅಲ್ಲಿ ತೊಂದರೆ ಆಗಲಾರದಂತಹ ರೀತಿಯಲ್ಲಿ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ನೀವು ಏನು ಹೇಳುವುದು, ಅಲ್ಲಿ ಹುಲ್ಲು ತಿನ್ನುವಂತಹ ಹುಲಿಗಳನ್ನು ಬಿಡಬೇಕೇ? ಬಿಳಿ ಹುಲಿಗಳು ಹುಲ್ಲು ತಿನ್ನುವಂಥದ್ದು ಬಿಡಬೇಕೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅಲ್ಲಿ ಕುರಿ ಬಿಡುವುದಕ್ಕೂ ಜಾಗ ಇಲ್ಲ. ಸುತ್ತಾ ಎಲ್ಲಾ ಜಾಗಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಬೆಟ್ಟ ಒಂದೇ ಇದೆ.

ಅಧ್ಯಕ್ಷರು : ಪ್ರಶ್ನೆ ಅದಲ್ಲ. ರಾಮದಾಸ್‌ರವರು ಹೇಳಿದರು ಇದು ಹರ್ಬಿವೋರಸ್ ಸಫಾರಿ ಎಂದು. ಹರ್ಬಿವೋರಸ್ ಎಂದರೆ ಬೇರೆ ಯಾವ ಪ್ರಾಣಿಗಳನ್ನು ತಿನ್ನದೆ ಹಲ್ಲನ್ನು ತಿಂದುಕೊಂಡಿರುತ್ತದೆ. ನೀವು ಬಿಳಿ ಹುಲಿಗಳನ್ನು ಬಿಡುತ್ತೇವೆ ಎಂದು ಹೇಳಿದಿರಿ. ಬಿಳಿ ಹುಲಿ ಏನಿದೆ ಅದು ಹುಲ್ಲು ತಿಂದುಕೊಂಡಿರುತ್ತದೆ. ನಿಮ್ಮ ಪ್ರಶ್ನೆ ಏನು ಹುಲ್ಲುತಿನ್ನುವಂತಹ ಹುಲಿಯನ್ನು ಬಿಡಬೇಕು ಎಂದು. ಸರಿಯಾಗಿ ವಿವರಣೆ ಸಿಗಲಿ ಹುಲ್ಲು ತಿನ್ನುವ ಹುಲಿಗಳು ಎಲ್ಲೂ ಇಲ್ಲ ಎಂದು ನಿಮ್ಮ ಅಭಿಪ್ರಾಯ.

ಶ್ರೀ ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಹುಲಿ ಯಾವಾಗಲೂ ಹುಲ್ಲು ತಿನ್ನುವುದೇ ಇಲ್ಲ. ಅವು ತಿನ್ನುವುದೇ ಮಾಂಸ.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರು ಹೇಳಿದಮೇಲೆ ಖಾಯಂ ಆಯಿತು. ಹುಲಿ ಯಾವಾಗಲೂ ಹುಲ್ಲು ತಿನ್ನುವುದಿಲ್ಲ. ಅದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಇಲ್ಲ, ಇಲ್ಲಾ, ಹುಲಿ ಹುಲ್ಲು ತಿನ್ನುತ್ತದೆ. ಸರ್ಕಾರದ ಈ ವರ್ಷದ ಕ್ಯಾಲೆಂಡರ್‌ನ್ನು ತಾವು ನೋಡಿದರೆ 1997 ಜನವರಿ ತಿಂಗಳಲ್ಲಿ ಎರಡು ಹುಲಿ ಫೋಟೋ ಇದೆ.

ಒಂದು ನಿಮಿಷ ನನ್ನ ಮಾತು ಕೇಳಿ. ಅದರ ಅಡಿಯಲ್ಲಿ ಬರೆದಿದ್ದಾರೆ. ಇದು ಹುಲಿ, ಸಂಪೂರ್ಣವಾಗಿ ಸಸ್ಯಹಾರಿ ಎಂದು ತಾವು ಅದನ್ನು ತರಿಸಿನೋಡಬೇಕು.

ಅಧ್ಯಕ್ಷರು : ಹೌದು, ನೀವು ಹುಲ್ಲು ತಿನ್ನುತ್ತದೆ ಎಂದು ಹೇಳುತ್ತಾ ವಾಟಾಳ್‌ರವರ ಕಡೆ ಏಕೆ ನೋಡುತ್ತೀರಿ? ಅದು ಉತ್ತರ ಪ್ರದೇಶ ಸರ್ಕಾರದ ಅಥವಾ ಈ ಊರಿನ ಹುಲಿಗಳಾ?

ಶ್ರೀ ಬಿ.ಬಿ. ಶಿವಪ್ಪ : ಅಲ್ಲ ಆ ಹುಲಿಗಳನ್ನು ಬಿಡುತ್ತಾರೆ ಎಂದು ಕಾಣುತ್ತದೆ ಅವರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಜಿಜ್ಞಾಸೆ ಆಗಿಬಿಟ್ಟಿತ್ತು. ನಾನು ನೇರವಾಗಿ ಮಾನ್ಯ ಸಚಿವರಲ್ಲಿ ಕೇಳುತ್ತೇನೆ, ಹುಲಿ ಹುಲ್ಲು ತಿನ್ನುತ್ತದೋ ಮಾಂಸ ತಿನ್ನುತ್ತದೋ ಎಂದು ನೋಡುವುದಕ್ಕೆ ತಾವು ಎಲ್ಲರನ್ನೂ ಅರಣ್ಯಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ. ಅಲ್ಲಿ ಹೋಗಿ ನೋಡಿಕೊಂಡು ಬರೋಣ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಆಗಬಹುದು ಅಲ್ಲ, ಪ್ರಾಮಾಣಿಕವಾಗಿ ಹೇಳಿ. ನಿಮ್ಮ ನಾಯಕತ್ವದಲ್ಲಿ ಬನ್ನೇರು ಘಟ್ಟ ಝೂಗಾರ್ಡನ್‌ಗೆ ಅಲ್ಲ, ನಾಗರಹೊಳೆ ಅಭಯಾರಣ್ಯಕ್ಕೆ ಕರೆದುಕೊಂಡು ಹೋಗಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಹೆಣ್ಣು ಹುಲಿ ಏನೋ ಹೇಳುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾವು ನೀವೂ ಜೊತೆಗೆ ಹೋಗೋಣ. ನಾವು ಹೋಗಿ ಹೊರಗಡೆ ಇರುತ್ತೇವೆ. ಅದು ಹುಲ್ಲು ತಿನ್ನುತ್ತದೋ, ಮಾಂಸ ತಿನ್ನುತ್ತದೋ ಎಂದು ನೋಡುವುದಕ್ಕೆ ನಮ್ಮ ಅರಣ್ಯ ಇಲಾಖೆ ಮಂತ್ರಿಗಳನ್ನು ಒಳಗೆ ಕಳುಹಿಸುತ್ತೇವೆ. ಅದು ಹುಲ್ಲು ತಿಂದು ಅವರನ್ನು ಮುಟ್ಟದೆ ಇದ್ದರೆ ಆಗ ನಾವು ಒಳಗಡೆ ಹೋಗುತ್ತೇವೆ.

ಅಧ್ಯಕ್ಷರು : ಹುಲಿಗಳು ಬಹಳ ಹುಷಾರು ಪ್ರಾಣಿ. ಅವುಗಳು ಸ್ವಜಾತಿಯನ್ನು ಕಂಡಾಗ ಏನೂ ಮಾಡುವುದಿಲ್ಲ. ಮೇಡಮ್ ಏನೋ ಹೇಳುತ್ತಾರೆ, ನೀವು ಹೆಣ್ಣು ಹುಲಿ ಬಗ್ಗೆ ಹೇಳುವುದು. ಅಲ್ಲಿ ಕೂಡ 33 ಪರ್ಸೆಂಟ್ ಬಿಡಬೇಕೆಂದು ಗಲಾಟೆ ಮಾಡುತ್ತೀರೋ ಏನೋ ಎಂದು ಭಯ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಪ್ರಾಣಿಗಳನ್ನು ತಿನ್ನತಕ್ಕಂಥ ಹುಲಿಗಳು ಒಂದು ಬಾರಿ ಮನುಷ್ಯರ ರಕ್ತದ ರುಚಿ ಕಂಡ ಮೇಲೆ ಮ್ಯಾನ್ ಈಟರ್ ಹುಲಿಗಳು ಎಂದು ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏಕೆ ಅವರ ಜೊತೆಯಲ್ಲಿ ಹೋಗಬೇಕು ಎಂದು ನನ್ನ ಅಭಿಪ್ರಾಯ. ಹುಷಾರಾಗಿರಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಮುತ್ತತ್ತಿಯಲ್ಲಿ ಎಲ್ಲಾ ದನಗಳು ಮಾಂಸಹಾರಿಗಳು. ಅದು ಏನೆಂದರೆ ನಾವು ಬೆಳೆಸುವ ರೀತಿಯಲ್ಲಿ ಹೋಗುತ್ತದೆ. ಹುಲ್ಲು ತಿನ್ನುವಂತಹ ಹುಲಿಗಳನ್ನು ಮಾಡಿದರೆ ಹುಲಿ ಹುಲ್ಲು ತಿನ್ನುತ್ತದೆ.

ಅಧ್ಯಕ್ಷರು : ವಾತಾವರಣಕ್ಕೆ ತಕ್ಕಂತೆ ಹೋಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಮಾಂಸಹಾರಿಗಳು, ಸಸ್ಯಹಾರಿಗಳು ವಾತಾವಣಕ್ಕೆ ಅನುಗುಣವಾಗಿ ಚಿಕನ್, ಮಟನ್ ಎಲ್ಲಾ ತಿನ್ನುತ್ತವೆ.

ಅಧ್ಯಕ್ಷರು : ಆಯಿತು, ನಿಮ್ಮ ವಿಚಾರ ಹೇಳಲಿಲ್ಲ ಎಂದು ನೀವು ಬೇಸರ ಪಟ್ಟುಕೊಳ್ಳುವುದು ಬೇಡ. ತಾವೇ ಹೇಳಿದ್ದೀರಿ, ಅಭಿನಂದನೆಗಳು ನಿಮಗೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ ನನ್ನ ಮೂಲ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಅಲ್ಲಿ ಮಾಡುತ್ತಿರುವಂಥದ್ದು ವಿಶೇಷವಾಗಿ ತಾವು ಕ್ರೂರ ಪ್ರಾಣಿಗಳ ಸಫಾರಿಯನ್ನು ಮಾಡುತ್ತಿದ್ದೀರಾ? ಇಲ್ಲಿ ಒಂದು ವಿಪರ್ಯಾಸ ಇದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಹುಲಿ ಬಗ್ಗೆ ಬಹಳ ಚೆನ್ನಾಗಿ ಚರ್ಚೆಯಾಯಿತು. ಹುಲಿ ಮಾಂಸಾಹಾರಿಗಳೋ ಅಥವಾ ಸಸ್ಯಾಹಾರಿಗಳೋ ಎಂದು. ಹುಲಿ ಯಾವತ್ತೂ ಹುಲ್ಲು ತಿನ್ನುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಹೇಗೆ ಗೊತ್ತು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಮೃಗಾಲಯದಲ್ಲಿ ನೋಡಿದ್ದೇವೆ. ಅದು ಹುಲ್ಲು ತಿನ್ನುವುದಿಲ್ಲ. ಅದು ಯಾವತ್ತೂ ಮಾಂಸವನ್ನೇ ತಿನ್ನುವುದು. ಒಂದು ಪ್ರಾಮಾಣಿಕತನ ಅದರಲ್ಲಿ ಇದೆ. ಅದು ಒಂದು ಬಾರಿ ಯಾವುದನ್ನಾದರೂ ಕೊಂದು ಬಿಟ್ಟರೆ 4-5 ದಿವಸ ಅದನ್ನೇ ತಿನ್ನುತ್ತಾ, ಬೇರೆ ಯಾವುದೇ ಪ್ರಾಣಿಯನ್ನು ಕೊಲ್ಲುವುದಿಲ್ಲ. ಒಂದು ದನ ಕೊಂದು ಅದು ಎಂಟು ದಿನದವರೆಗೆ ಇದ್ದರೆ ಅದನ್ನು ಬಿಟ್ಟು ಬೇರೆನೂ ತಿನ್ನದೆ ಅದು ಆದಮೇಲೆ ಇನ್ನೊಂದನ್ನು ತಿನ್ನುವುದಕ್ಕೆ ಹೋಗುತ್ತದೆ. ಅಷ್ಟು ಪ್ರಾಮಾಣಿಕತೆ ಇದೆ ಆ ಪ್ರಾಣಿಯಲ್ಲಿ.

ಶ್ರೀ ಕೆ.ಎನ್. ನಾಗೇಗೌಡ : ಇಲ್ಲಿ ಎಲ್ಲಾ ಚಿಕನ್ ಮಟನ್ ತಿನ್ನುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಇವರು ಮನುಷ್ಯನಿಗಿಂತ ಹುಲಿನೇ ಸರಿ ಎಂದು ತೀರ್ಮಾನ ಮಾಡುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೌದು ಅದು ಎಂದೂ ಸುಳ್ಳು ಹೇಳುವುದಿಲ್ಲ. ಮನುಷ್ಯ ಸುಳ್ಳು ಹೇಳಬಹುದು. ನಾಲ್ಕಾರು ತಿನ್ನಬಹುದು, ನಾಳೆ ಸಲುವಾಗಿ ಬಚ್ಚಿಟ್ಟುಕೊಳ್ಳಬಹುದು, ಆದರೆ ಅದು ಬಚ್ಚಿಟ್ಟುಕೊಳ್ಳುವುದಿಲ್ಲ. ಒಂದು ಹೊಡೆದು ಕೊಂದು ಅದು ಪೂರ್ತಿ ಮುಗಿದ ಮೇಲೆ ಇನ್ನೊಂದನ್ನು ಹೊಡೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹುಲಿ ಸುಳ್ಳು ಹೇಳುವುದಿಲ್ಲ. ಎಂದು ನಿಮಗೆ ಹೇಗೆ ಗೊತ್ತು? ಈ ಸದನದಲ್ಲಿ ಸತ್ಯಕ್ಕೆ ದೂರವಾದ ಮಾತು ಆಡುತ್ತಿದ್ದಾರೆ. ಹುಲಿ ಸುಳ್ಳು ಹೇಳುವುದಿಲ್ಲ, ನಿಜ ಹೇಳುತ್ತದೆ ಎನ್ನುವುದು ಹೇಗೆ ಗೊತ್ತು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಜೀವಿ ಶಾಸ್ತ್ರದ ಪ್ರಕಾರ ಪ್ರಾಣಿಗಳು ಬಹಳ ಒಳ್ಳೆಯ ಪ್ರಾಣಿಗಳು. ಮನುಷ್ಯ ಕ್ರೂರ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಿರುವಂತದ್ದು, ಸತ್ಯ ಹೇಳುವವರೆಲ್ಲ ಪ್ರಾಣಿಗಳು ಎಂದು.

ಶ್ರೀ ಎ. ರಾಮದಾಸ್ : ಅಧ್ಯಕ್ಷರೆ, ಎಲ್ಲರೂ, ಸೇರಿ ಹುಲಿಗೆ ಅಪಮಾನ ಮಾಡುತ್ತಿದ್ದಾರೆ.

ಅಧ್ಯಕ್ಷರು : ಹಾಗಲ್ಲ. ಅವರು ಹೇಳಿದ ಮಾತಿನ ಅರ್ಥ ಹುಲಿ ತನಗೆ ಆಹಾರ ಬೇಕಾದಾಗ ಒಂದು ಸಾರಿ ಬೇಟೆಯಾಡಿದ ಮೇಲೆ ಸಂಪೂರ್ಣ ಅದು ಮುಗಿಯುವವರೆಗೆ ಇನ್ನೊಂದರ ಸುದ್ದಿಗೆ ಹೋಗುವುದಿಲ್ಲ. ಶೇಖರಣೆ ಮಾಡಿ ಇಡುವುದಿಲ್ಲ ಎನ್ನುತ್ತಾರೆ. ನಾವು ಈ ರೀತಿ ಅಲ್ಲ. ನಮಗೆ ಎಷ್ಟು ಕೋಟಿಯಾದರೂ ಸಾಕಾಗುವುದಿಲ್ಲ. ಶೇಖರಣೆ ಮಾಡುತ್ತಲೇ ಇರುತ್ತೇವೆ. ಇದೊಂದು ವ್ಯಾಧಿ, ಹುಲಿಗೆ ಆ ವ್ಯಾಧಿ ಇಲ್ಲ ಎಂದು ಅವರು ಹೇಳುವುದು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಕಾಡುಮೃಗಗಳನ್ನ, ವಿಶೇಷವಾಗಿ ಕ್ರೂರಮೃಗಗಳನ್ನ ಸಾಕಲಿಕ್ಕೋಸ್ಕರ ಸಫಾರಿ ಮಾಡಿರುವಂತದ್ದು, ಲೇಔಟಿನ ಮಧ್ಯದಲ್ಲಿ ಇವರು ಪ್ಲಾನ್ ಮಾಡಿದ್ದಾರೆ. ಆದರೆ ಎಚ್.ಯು.ಡಿ ಇಲಾಖೆ ಕಾಡಿನ ಮಧ್ಯದಲ್ಲಿ ಲೇಔಟ್ ಮಾಡುವುದಕ್ಕೋಸ್ಕರ ಅನುಮತಿಯನ್ನು ಕೊಟ್ಟಿದೆ.

ಅಧ್ಯಕ್ಷರು : ಅದಕ್ಕೆ ಅವರು ಆಗಲೇ ಉತ್ತರವನ್ನು ಹೇಳಿದರು. ಅದು ಬೇರೆ ಪ್ರಶ್ನೆಯಾಗುತ್ತದೆ, ನನ್ನ ಹತ್ತಿರ ಸಧ್ಯಕ್ಕೆ ಮಾಹಿತಿ ಇಲ್ಲ, ನೋಟೀಸ್ ಕಳುಹಿಸಿಕೊಟ್ಟರೆ ತರಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. ಈಗ ತಾವು ಪ್ರಸ್ತಾಪ ಮಾಡಿದ್ದೀರಿ, ಹೆಚ್.ಯು.ಡಿ ಇಲಾಖೆಯ ಜೊತೆ ಮಾತನಾಡಿ ತಮಗೆ ವರ್ತಮಾನ ಕೊಡುತ್ತಾರೆ.

ಶ್ರೀ ಎ. ರಾಮದಾಸ್ : ನನ್ನ ಮುಖ್ಯವಾದ ಪ್ರಶ್ನೆ ಇಷ್ಟೆ. ಏನೆಂದರೆ ಆ ಪ್ರದೇಶಗಳಲ್ಲಿರುವಂಥ ಜನಗಳಿಂದ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮನುಷ್ಯ ಎಷ್ಟು ಅಪಾಯಕಾರಿ ಎಂಬುದನ್ನ ನಾಗರಹೊಳೆಯಲ್ಲಿ ಮಾಡಿದ್ದಾರೆ. ಅಲ್ಲಿ ಒಂದು ಕನ್ನಡಿಯ ಮುಂದೆ ಪರದೆ ಹಾಕಿ ಅವಕುಂಟನ ಮಾಡಿದ್ದಾರೆ. 'ಹೆಚ್ಚು ಅಪಾಯಕಾರಿಯಾದ ಪ್ರಾಣಿ' ಎಂದು ಬರೆದಿದ್ದಾರೆ. ಆ ಅವಕುಂಟನವನ್ನು ತೆಗೆದರೆ ಇವನ ಮುಖೇನ ಅಲ್ಲಿ ಕಾಣುತ್ತದೆ. ಆದ್ದರಿಂದ ಎಲ್ಲಾ ಪ್ರಾಣಿಗಳಿಂತ ಅಪಾಯಕಾರಿ ಮನುಷ್ಯನೆ. ಹಸಿವಾದಾಗ ಮಾತ್ರ ಹುಲಿ ತಿನ್ನುತ್ತದೆ. ಆದರೆ ಹಸಿವಿಲ್ಲದಿದ್ದಾಗಲೂ ನಾವು ತಿನ್ನುತ್ತಲೇ ಹೋಗುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಏನೇ ಆಗಲಿ ಅಧ್ಯಕ್ಷರೆ, ನನ್ನದೊಂದು ಮನವಿ ಏನೆಂದರೆ ನಾಗಮಾರಪಲ್ಲಿಯವರು ಇದರ ಬಗ್ಗೆ ಬಹಳ ಆಳವಾಗಿ ಸಂಶೋಧನೆ ಮಾಡಿದ್ದಾರೆ. ಅವರಿಗೆ ಇದೇ ಮಂತ್ರಿ ಪದವಿಯನ್ನು ಕಂಟಿನ್ಯೂ ಮಾಡಿ. ಮತ್ತು ನಾಗರಹೊಳೆಯಲ್ಲಿ ಅವರನ್ನು ಕೆಲವು ದಿವಸ ಬಿಟ್ಟುಬಿಡಿ.

ಅಧ್ಯಕ್ಷರು : ನಾವು ಯೋಚನೆ ಮಾಡಿದ್ದು ಪಶ್ಚಿಮಘಟ್ಟಗಳಲ್ಲಿ ಹುಲಿಗಳು ಇರಬಹುದು ಎಂದು. ಹೈದರಾಬಾದ್- ಕರ್ನಾಟಕದಲ್ಲೂ ಇದ್ದಾವೆ ಎಂದು ಈಗ ನಮಗೆ ಒಂದು ಅಂದಾಜು ಸಿಕ್ಕಿತು.

ಶ್ರೀ ಸಿ.ಎಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೆ, ರಾಮದಾಸ್‌ರವರು ಕೇಳಿದಂಥ ಮೂಲ ಪ್ರಶ್ನೆಗೆ ಅವರಿಂದ ಉತ್ತರ ಬರಲಿಲ್ಲ. ಅದು ಸೂಕ್ತವಾದ ವಾತಾವರಣ ಅಲ್ಲ, ಸೂಕ್ತವಾದ ಜಾಗ ಅಲ್ಲ, ಕ್ರೂರಮೃಗಗಳನ್ನು ಅಲ್ಲಿ ತಂದು ಬಿಡುವುದಕ್ಕಾಗುವುದಿಲ್ಲ, ಈ ಸರ್ಕಾರದ ಯೋಜನೆಯನ್ನು ಬದಲಾಯಿಸಿಕೊಳ್ಳಿ ಎನ್ನುವಂತದ್ದು ಅವರ ವಿಚಾರ ಇದೆ. ಆದ್ದರಿಂದ ದಯವಿಟ್ಟು ಅದಕ್ಕೆ ಸಂಬಂಧಪಟ್ಟಹಾಗೆ ಸೂಕ್ತ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಸಭಾಧ್ಯಕ್ಷರೆ, ಜನ ವಾಸಮಾಡುವ ಸ್ಥಳದಲ್ಲಿ ನೀವು ಸಫಾರಿ ಮಾಡಿದರೆ ಪ್ರಾಣಿಗಳು ಮನುಷ್ಯನನ್ನ ಒಬ್ಬೊಬ್ಬರನ್ನಾಗಿ ಮುಗಿಸಿಕೊಂಡು ಬರುತ್ತದೆ. ಇವರು ಇದನ್ನು ವೈಜ್ಞಾನಿಕವಾಗಿ ಏನಾದರೂ ಚಿಂತನೆ ಮಾಡಿದ್ದಾರಾ? ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಇರುವ ಸಂಪರ್ಕ ಎಷ್ಟು ಕಷ್ಟ ಇದೆ ಎಂಬುದನ್ನು ನೀವು ತಿಳಿದಿದ್ದೀರಾ? ತಿಳಿದಿದ್ದರೆ ವಿವೇಚನೆ ಇಲ್ಲದೆ ಮಾಡಿರತಕ್ಕ ಯೋಚನೆ ಇದು. ಈಗಾಗಲೇ ಅಲ್ಲಿನ ಜನ ಹುಲಿ ಸಫಾರಿ ಇಲ್ಲಿ ಬಂದರೆ ನಾವು ಬದುಕುವುದು ಹೇಗೆ ಎಂದು ಭಯಬೀತರಾಗಿದ್ದಾರೆ. ಇದನ್ನೆಲ್ಲ ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವು ಇನ್ನ ಪ್ರಾಣಿ ಎದುರುಗಡೆ ಹೋಗಿಲ್ಲ ಎಂದು ಕಾಣುತ್ತದೆ. ಪ್ರಾಣಿಗಳು ಬಹಳ ಒಳ್ಳೆಯವು ಇವೆ. ಅದಕ್ಕೆ ತೊಂದರೆಯನ್ನು ಕೊಟ್ಟರೆ ಮಾತ್ರ ಮೇಲೆ ಬೀಳುತ್ತದೆ. ಇಲ್ಲದಿದ್ದರೆ ಇಲ್ಲ. ಒಂದನ್ನು ತಮಗೆ ಹೇಳುತ್ತೇನೆ. ಅಲ್ಲಿ ಪರೀಕ್ಷೆ ಮಾಡಿ, ಯೋಚನೆ ಮಾಡಿ ಏನೇನು ಮಾಡಬೇಕೊ ನೋಡೋಣ. ಇನ್ನು ಏನೂ ಮಾಡಿಲ್ಲ.

ಶ್ರೀ ಎ. ರಾಮದಾಸ್ : ಅಧ್ಯಕ್ಷರೆ, ಸಫಾರಿ ಮಾಡಲಿ, ನಾವು ಆ ಕ್ರೂರಮೃಗಗಳನ್ನು ಬಿಟ್ಟು ಉಳಿದಂಥ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಅಲ್ಲಿ ಸಾಕುಪ್ರಾಣಿಗಳನ್ನು ಇಡುವಂಥ ವ್ಯವಸ್ಥೆಯನ್ನು ಮಾಡಬೇಕು. ಮಾಡಿ ಆ ಪ್ರದೇಶದಲ್ಲಿ ಬೇರೆಯವರು ಭೂಮಿಯನ್ನು ಕಬಳಿಸುವಂತಹದ್ದನ್ನು ತಪ್ಪಿಸಬೇಕು. ಇಷ್ಟನ್ನು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದನ್ನು ಪರೀಕ್ಷೆ ಮಾಡಿ ಏನಾಗಿದೆ ಎಂಬುದನ್ನು ತರಿಸಿಕೊಂಡು ನೋಡುತ್ತೇನೆ.

ಗುಬ್ಬಿ ತಾಲ್ಲೂಕು, ಹಾಗಲವಾಡಿಗೆ ಹೆರಿಗೆ ಆಸ್ಪತ್ರೆ ಮಂಜೂರಾತಿ

414 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?